ಅಧ್ಯಕ್ಷರು.—ಮಾನ್ಯ ರಾಜೂಗೌಡರೇ, ನಿಮಗೆ ಮೂರು ಸಾರಿ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಟ್ಟಿದ್ದೇನೆ. ನಾಳೆ ಗವರ್ನರ್ ಅಡ್ರಸ್ ಮೇಲೆ ಚರ್ಚೆ ನಡೆಯುತ್ತದೆ, ಆಗ ಅಂಕಿಅಂಶ ತೆಗೆದು ಕೊಂಡು ಚರ್ಚೆ ಮಾಡಿ.

ಶ್ರೀ ಜೆ. ರಾಜುಗೌಡ.—ಮಾನ್ಯ ಅಧ್ಯಕ್ಷರೆ ನಾನು ಹೇಳುವುದೇನೆಂದರೆ.....

ಅಧ್ಯಕ್ಷರು.—ನೀವು ಮಂತ್ರಿಗಳ ಹತ್ತಿರ ಬಂದು ಮಾತನಾಡಿ.

## ನಿಯಮ ೩೫೪ರ ಮೇರೆಗೆ

ಅಧ್ಯಕ್ಷರು.—

ಶ್ರೀ ರಾಮಯ್ಯ.

ಶ್ರೀ ಎಂ. ಎಸ್. ಪಾಟೀಲ್ ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ.

ಶ್ರೀ ವೇದಾಂತ ಹೆಮ್ಮಿಗೆ.—ನನ್ನ ೩೫೪ ನಿಯಮದ ವಿಷಯಕ್ಕೆ ಉತ್ತರ ಬಂದಿಲ್ಲ.

## (೧) ಶೆಟ್ಟಿಕೆರೆ ಹೋಬಳಿ ಅಗಸರಹಳ್ಳಿಯಲ್ಲಿ ಸಾರ್ವಜನಿಕರಿಗಾಗಿ ಇದ್ದ ಓಣಿಯನ್ನು ಒತ್ತುವರಿ ಮಾಡಿರುವುದು

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಮತ್ತು ಸಾರ್ವಜನಿಕ ಓಣಿ ಮೊದಲಾದ ಸ್ಥಳಗಳಲ್ಲಿ ವಾಸಗಿಯೆಂಪರು ಅಕ್ರಮ ಕಟ್ಟಡ ಕಟ್ಟುವುದು, ಸ್ವಾಧೀನಪಡಿಸಿಕೊಳ್ಳುವುದು, ಮೊದಲಾದುವುಗಳನ್ನು ತಡೆದು ರಕ್ಷಿಸಬೇಕಾದುದು ಪಂಚಾಯಿತಿ ಕಾರ್ಯದರ್ಶಿ, ರೆವಿನ್ಯೂ ಇನ್ಸ್‌ಪೆಕ್ಟರ್ ಬಿ.ಡಿ.ಓ. ಮೊದಲಾದ ಅಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ. ಆದರೆ ಚಿಕ್ಕನಾಯಕನ ಹಳ್ಳಿ ತಾಲ್ಲೂಕು ಶೆಟ್ಟಿಕೆರೆ ಹೋಬಳಿ ಅಗಸರಹಳ್ಳಿ ಗ್ರಾಮದಲ್ಲಿ ಆ ಗ್ರಾಮ ವಾಸಿಗಳಾದ ಮಲ್ಲೇಶಯ್ಯ ಬಿನ್ ಹೆಜ್ಜಪ್ಪ, ಗಂಗಣ್ಣ ಬಿನ್ ಸಿದ್ಧರಾಮಯ್ಯ ಇವರ ಏರಡೂ ಮನೆಗಳ ಮಧ್ಯ ಭಾಗದಲ್ಲಿ ಉತ್ತರ ದಕ್ಷಿಣವಾಗಿ ಆ ಗ್ರಾಮದ ಜನ ಮತ್ತು ಈ ಓಣಿಯ ಪಶ್ಚಿಮ ಭಾಗದ ಮನೆಗಳ ಜನ ಈ ಓಣಿಯಲ್ಲಿ ಓಡಾಟ ಮಾಡಬೇಕಾಗಿದೆ. ಇಂತಹ ಸಾರ್ವಜನಿಕರ ಅನುಕೂಲಕ್ಕಾಗಿರುವ ಈ ಓಣಿಯನ್ನು ಈ ಓಣಿಯ ಪೂರ್ವ ಭಾಗದ ವಾಸಿಗಳಾದ ಗಂಗಣ್ಣ ಬಿನ್ ಸಿದ್ಧರಾಮಯ್ಯ ಮತ್ತು ಇವರ ತಮ್ಮಂದಿರಾದ ಶಿವಣ್ಣ ರಾಮಲಿಂಗಯ್ಯ ಮತ್ತು ಸಿದ್ಧಪ್ಪ ಇವರುಗಳು ಈ ಓಣಿಯನ್ನು ಪೂರ್ಣ ಒತ್ತುವರಿ ಮಾಡಿ ತಮ್ಮ ಮನೆಗಳನ್ನು ಉಟಾವಣೆ ಮಾಡಲು ಪ್ರಯತ್ನಿಸಿದಾಗ ಮಲ್ಲೇಶಯ್ಯ ಬಿನ್ ಹೆಜ್ಜಯ್ಯ ಮತ್ತು ಗ್ರಾಮಸ್ಥರು ಪಂಚಾಯಿತಿ ಅನುಮತಿ ಇಲ್ಲದೆ ಅಕ್ರಮವಾಗಿ ಸಾರ್ವಜನಿಕ ಓಣಿಯನ್ನು ಒತ್ತುವರಿ ಮಾಡಿ ಕಟ್ಟಲು ಉದ್ದೇಶಿಸಿರುವ ಕಟ್ಟಡವನ್ನು ನಿಲ್ಲಿಸುವಂತೆ ಸಂಬಂಧಪಟ್ಟ ಪಂಚಾಯ್ತಿ ಕಾರ್ಯದರ್ಶಿ, ರೆವಿನ್ಯೂ ಇನ್ಸ್‌ಪೆಕ್ಟರು, ತಹಶೀಲ್ದಾರ್, ಬಿ.ಡಿ.ಓ. ಅಸಿಸ್ಟೆಂಟ್ ಕಮೀಷನರ್, ತಿಪಟೂರು ಇವರುಗಳಿಗೆ ಅರ್ಜಿಯನ್ನು ಸಲ್ಲಿಸಲಾಗಿ ಇದುವರೆಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಪಂಚಾಯಿತಿ ಅನುಮತಿ ಇಲ್ಲದೆ ನೂರಾರು ವರ್ಷಗಳಿಂದ ಸಾರ್ವಜನಿಕರು ಓಡಾಡುತ್ತಿದ್ದು ಈ ಓಣಿಯನ್ನು ಪೂರ್ಣ ಒತ್ತುವರಿ ಮಾಡಿದಾಗ ಅವರುಗಳ ಮೇಲೆ ಕ್ರಮ ತೆಗೆದುಕೊಂಡು ಕಟ್ಟಡ ಕಟ್ಟದಂತೆ ಅಥವಾ ಅಕ್ರಮವಾಗಿ ಅನುಮತಿ ಇಲ್ಲದೆ ಕಟ್ಟಿದ ಕಟ್ಟಡವನ್ನು ಖುಲ್ಲಾ ಮಾಡಿಸಲು ಈ ಅಧಿಕಾರಿಗಳಿಗೆ ಕಾನೂನಿನ ಅಧಿಕಾರವಿಲ್ಲವೆ ? ಈ ಕಾನೂನು ಇದ್ದೂ ಇವರುಗಳು ಯಾವುದೇ ಕ್ರಮ ತೆಗೆದುಕೊಳ್ಳದೇ ಸುಮ್ಮನಿರಲು ಕಾರಣವೇನು ? ಈ ಬಗ್ಗೆ ತುಮಕೂರು ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲಿಸಿ ಸದರಿ ಅಕ್ರಮ ಕಟ್ಟಡವನ್ನು ಖುಲ್ಲಾ ಮಾಡಿಸಿ ಓಣಿಯಲ್ಲಿ ಸಾರ್ವಜನಿಕರು ಓಡಾಡಲು ಅನುಕೂಲವಾಗುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ಆದೇಶಕೊಡಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತೇನೆ.